ನಕ್ಷತ್ರಪಟ



ಲಲಿತಾ ಕೆ. ಹೊಸಪ್ಯಾಟಿ

ಕಲೆ: ಸಂತೋಷ್ ಸಸಿಹಿತ್ಲು

# ಬಿಳಿಯಾದರೇನು, ಕರಿಯಾದರೇನು?

'ಬೆರಗು' ಎಂಬ ಕಾನನವದು. ಅಲ್ಲಿ ಹುಲಿ, ಸಿಂಹ ಆನೆ, ಕಡವೆ, ನರಿ, ಕರಡಿ ಮುಂತಾದ ಪ್ರಾಣಿಗಳ ಜೊತೆಗೆ ಪಕ್ಷಿಗಳು ವಾಸವಾಗಿದ್ದವು. ಆ ಕಾಡಿನ ಮರದ ಕೊಂಬೆಗೆ ಬಿಳಿಯ ಹದ್ದೊಂದು ಗೂಡು ಕಟ್ಟಿಕೊಂಡಿತ್ತು. ಬಿಳಿಯ ಹದ್ದಿಗೆ ಚುಮು ಎಂಬ ಮರಿಯಿತ್ತು. ದೃಷ್ಟಿ ತೆಗೆಯುವಂತಿದ್ದ ಮರಿ ಮೇಲೆ ತಾಯಿ ಹದ್ದಿಗೆ ಬಲು ಪ್ರೀತಿ. ಮರಿಯನ್ನು ಗೂಡಿನಲ್ಲಿ ಬಿಟ್ಟು ಆಹಾರ ಹುಡುಕಿ ಹೋಗುವಾಗ, ಮರಿಯ ತಲೆಗೆ ಟೋಪಿ ಕಟ್ಟಿ, ಕಾಲಿಗೆ ಉಣ್ಣೆಯ ಸಾಕ್ಸ್ ಹಾಕಿ, ಬೆಚ್ಚಗಿರಲೆಂದು ಸ್ವೆಟರ್ ಹಾಕಿ, ಗೂಡಿನಲ್ಲಿಯೇ ಇರಲು ತಿಳಿಸಿತ್ತು. ಮರಿಗೆ ತಾಯಿ ಹದ್ದು ಹೊರಗೆ ಹಾರಿ ಬಂದರೆ ಗುಮ್ಮಾ ಬಂದು ಹೊತ್ತುಕೊಂಡು ಹೋಗುತ್ತದೆ ನೋಡು ಎಂದು ಹೆದರಿಸಿತ್ತು.

ಕಾಗೆಯೂ ಗೂಡು ಅದೇ ಮರದ ಟೊಂಗೆಯ ಮೇಲಿತ್ತು. ಆ ಕಾಗೆಗೂ ಪುಟ್ಟ ಕಾಜು ಕಾಗೆ ಮರಿಯಿತ್ತು. ಹದ್ದಿನ ಮರಿ ಕೆಳಗೆ ಆಡುತ್ತಿದ್ದ ಕಾಜೂವನ್ನು ಗೂಡಿನಿಂದ ಇಣುಕಿ ಇಣುಕಿ ನೋಡುತ್ತಿತ್ತು. ಅಮ್ಮ ಬರಲಿ ನಾನೇ ಹೋಗಿ ಆ ಕಪ್ಪು ಮರಿಯ ಪರಿಚಯ ಮಾಡಿಕೊಳ್ಳುವೆ. ಅದರ ಗರಿಗಳು ಚಂದ ಕಪ್ಪಗಿವೆ. ಮಿರಮಿರನೆ ಮಿಂಚುತ್ತಿವೆ. ಕಣ್ಣುಗಳಂತೂ ಗುಲಗಂಜಿ. ಅಬ್ಬಾ ಈ ಕಾಡಿಗೆ ಬಂದು ಒಳ್ಳೆಯದಾಯಿತು, ಇಂತಹ ಕಪ್ಪಿನ ಹಕ್ಕಿ ನೋಡುವಂತಾಯಿತು ಎಂದು ಮತ್ತೆ ಇಣುಕಿ ನೋಡತೊಡಗಿತು.

ಅಷ್ಟರಲ್ಲೇ ಮರಿ ಕಾಗೆ ಹದ್ದಿನ ಗೂಡಿನ ಮುಂದೆ ನಿಂತು, 'ಮುದ್ದು ಪಕ್ಷಿಯೇ..! ಬಾ ಹೊರಗೆ' ಎಂದು ಕರೆಯಿತು. ಅದಕ್ಕೆ ಕಾಯುತ್ತಿದ್ದಂತೆ ಹದ್ದಿನ ಮರಿ ಒಮ್ಮೆಲೇ 'ಟಣ್'

